# 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.

## ಸತ್ರ ಪ್ರಕರಣ ಸಂಖ್ಯೆ.68/2024

ಪಿರ್ಯಾದುದಾರರು : ಮಂಡ್ಯ ಪೂರ್ವ ಪೊಲೀಸ್ ಠಾಣೆ.

- ವಿರುದ್ಧ -

ಆರೋಪಿಗಳು : ಶ್ರೀ ಕುಮಾರ ಮತ್ತು ಇತರರು.

## : ದೋಷಾರೋಪಣೆ :

ನಾನು ಶ್ರೀಮತಿ ಸಯೀದುನ್ನೀಸ, ಎಂ.ಎ., ಎಲ್ಎಲ್.ಬಿ., 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ :

ನೀವು ಆರೋಪಿತರು : 1. ಶ್ರೀ ಕುಮಾರ, 20 ವರ್ಷ,
ಬಿನ್ ರಾಮು.

2. ಶ್ರೀ ಅಶೋಕ, 24 ವರ್ಷ,
ಬಿನ್ ರಾಮು.

ಇಬ್ಬರೂ ವಾಸಃ 2ನೇ ಅಡ್ಡರಸ್ತೆ,
ಹಾಲಹಳ್ಳಿ ಕೆರ, ಮಂಡ್ಯ ಸಿಟಿ.

ಮೊದಲನೆಯದಾಗಿ, ದಿನಾಂಕಃ 23.06.2023 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಮಂಡ್ಯ ಪೂರ್ವ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ 2ನೇ ಅಡ್ಡರಸ್ತೆ, ಹಾಲಹಳ್ಳಿ ಕೆರೆ, ಬೆಟ್ಟೇಗೌಡರವರ ಮನೆಯ ಮುಂಭಾಗ ಆರೋಪಿತರಾದ ನೀವು ಹಣದ ವಿಚಾರವಾಗಿ ಸಮಾನ ಉದ್ದೇಶ ಹೊಂದಿ ಚಾಸಾ-1 ಸೋಮಶೇಖರ ಮತ್ತು ಚಾಸಾ-2 ಮಹದೇವರವರನ್ನು ಅಕ್ರಮವಾಗಿ ಅಡ್ಡಗಟ್ಟಿ ಮುಂದೆ ಹೋಗದಂತೆ ತಡೆದಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.341 ಸಹವಾಚಕ ಕಲಂ.34 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ 2 ನೇ ಆರೋಪಿಯಾದ ನೀವು ಚಾಸಾ-2 ರವರಿಗೆ ಶಾಂತಿ ಭಂಗವನ್ನು ಪ್ರಚೋದಿಸುವ ಉದ್ದೇಶದಿಂದ ಉದ್ದೇಶಪೂರ್ವಕ ಅವಮಾನ ಮಾಡುವ ಸಲುವಾಗಿ ಅವರನ್ನು ಉದ್ದೇಶಿಸಿ 'ಸಾಲ ಕೇಳಲು ಮನೆ ಬಳಿ ಬಂದಿದ್ದೀರಾ ಸೂಳೆಮಕ್ಕಳಾ' ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಚಾಸಾ-2 ರವರು 2 ನೇ ಆರೋಪಿಯಾದ ನಿಮ್ಮನ್ನು ಉದ್ದೇಶಿಸಿ ಈಸಿಕೊಂಡಿರುವ ಸಾಲದ ಹಣ ವಾಪಸ್ಸು ಕೊಡದೆ ಹಣ ಕೇಳಿದ್ದಕ್ಕೆ ಸೋಮನನ್ನೇ ಬೈಯುತ್ತೀಯಾ ಎಂದು ಕೇಳಿದಾಗ 1 ನೇ ಆರೋಪಿಯಾದ ನೀವು ಸಮಾನ ಉದ್ದೇಶ ಹೊಂದಿ ಚಾಸಾ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವರನ್ನು ಉದ್ದೇಶಿಸಿ ನೀನು ಮಧ್ಯೆ ಬರುತ್ತೀಯಾ ನಿನ್ನನ್ನು ಇಲ್ಲೇ ಸಾಯಿಸುತ್ತೇವೆ ಎಂದು ಡ್ರಾಗರ್ ನಿಂದ ಚಾಸಾ-2 ರವರ ತಲೆಯ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿ ತೀವ್ರ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.307 ಸಹವಾಚಕ ಕಲಂ.34 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಡ್ರಾಗರ್ ನಿಂದ ಚಾಸಾ-2 ರವರ ತಲೆಯ ಮೇಲೆ ಹಲ್ಲೆ ಮಾಡಿ ಅವರಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.326 ಸಹವಾಚಕ ಕಲಂ.34 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಐದನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿಯಾದ ನೀವು ಸಮಾನ ಉದ್ದೇಶ ಹೊಂದಿ ಡ್ರ್ಯಾಗರ್ ನಿಂದ ಚಾಸಾ-2 ರವರ ಮುಂಗೈ ಮೇಲೆ ಹಲ್ಲೆ ಮಾಡಿ ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.34 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-2 ರವರನ್ನು ಉದ್ದೇಶಿಸಿ ಅವರಿಗೆ ಭಯ ಬರುವ ರೀತಿಯಲ್ಲಿ 'ನಾವು ನಿನ್ನನ್ನು ಸಾಯಿಸದೆ ಬಿಡುವುದಿಲ್ಲ' ಎಂದು ಅವರಿಗೆ ಜೀವ ಬೆದರಿಕೆಯನ್ನು ಹಾಕಿರುತ್ತೀರಿ. ಆ ಮೂಲಕ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಈ ಮೇಲೆ ಹೇಳಿರುವ ದೋಷಾರೋಪಣೆ ಬಗ್ಗೆ ನಿಮ್ಮ ವಿಚಾರಣೆ ಈ ನ್ಯಾಯಾಲಯದಲ್ಲಿ ನಡೆಯತಕ್ಕದ್ದು ಎಂದು ಆದೇಶಿಸಲಾಗಿದೆ.

(ಸಯೀದುನ್ನೀಸ)
ದಿನಾಂಕ: 25.11.2024. 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.